

# ಅಪಾಯ ತರಬಲ್ಲ ಕುತೂಹಲಕಾರಿ ಆಕಾಶಕಾಯ

ದೊಡ್ಡ ದೂರದರ್ಶಕಗಳಲ್ಲಿ ಗ್ರಹಗಳಂತೆ ಗೋಲಾಕಾರದಲ್ಲಿ ಕಾಣಿಸುವ ಬದಲು ನಕ್ಷತ್ರಗಳಂತೆ ಕಾಣಿಸುವ ಆಕಾಶಕಾಯಗಳಿಗೆ ಕ್ಷುದ್ರಗ್ರಹಗಳೆಂದು ಹೆಸರು. 'ಕ್ಷುದ್ರ' ಎಂದು ಕರೆಸಿಕೊಂಡರೂ ಬಾನಿನಿಂದ ಭೂಮಿಗೆ ಅಪ್ಪಳಿಸುವ ಮೂಲಕ ಈ ಆಕಾಶಕಾಯಗಳು ದೊಡ್ಡ ಅನಾಹುತ ಉಂಟುಮಾಡಬಲ್ಲವು. ಆ ಆತಂಕದ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ಕ್ಷುದ್ರಗ್ರಹದ ಬಗ್ಗೆ ನಿರಂತರ ಸಂಶೋಧನೆಗಳು ನಡೆದಿವೆ. ಆ ಶೋಧಗಳು, ಮಾನವನ ಜ್ಞಾನದಿಗಂತದ ವಿಸ್ತರಣೆ ಹಾಗೂ ಕೈಗಾರಿಕಾ ನಾಗರಿಕತೆಯ ಮುನ್ನಡೆಯ ದೃಷ್ಟಿಯಿಂದ ಮಹತ್ವ ಪಡೆದಿವೆ. ಕ್ಷುದ್ರಗ್ರಹಗಳ ಅಪ್ಪಳಿಸುವಿಕೆಯಿಂದ ಭೂಜೀವಿಗಳನ್ನು ರಕ್ಷಿಸುವ ದೃಷ್ಟಿಯಿಂದ ಕೂಡ ಅವುಗಳ ಕುರಿತ ಅಧ್ಯಯನ ಅಗತ್ಯ. ಕ್ಷುದ್ರಗ್ರಹಗಳ ಅದ್ಭುತಲೋಕವನ್ನು ಅನಾವರಣಗೊಳಿಸುವ ಈ ವಿಶ್ಲೇಷಣಾತ್ಮಕ ಬರಹ, ಬಾನು–ಭೂಮಿಯ ನಡುವೆ ಕಲ್ಪನೆ–ವಾಸ್ತವಗಳೊಂದಿಗೆ ಸಹೃದಯರ ಕೈಹಿಡಿದು ನಡೆಸುವಂತಿದೆ.

■ ಡಾ. ಬಿ.ಆರ್‌. ಗುರುಪ್ರಸಾದ್